ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

" ಅಭಿವೃದ್ಧಿ ಭವನ " ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ:ಯೋಜನೆ/ಮ್ಯಾಕ್ರೋ/ಸಾಮನ್ಯ/46/2017-18 | 1809 ದಿನಾಂಕ: 21-10-2017 23

ಗೆ,

ವ್ಯವಸ್ಥಾಪಕ ನಿರ್ದೇಶಕರು
ಕೆ.ಆರ್..ಐ.ಡಿ.ಎಲ್
ಬೆಂಗಳೂರು

ಮಾನ್ಯರೆ,

ವಿಷಯ: ಹೈ.ಕ.ಪ್ರ.ಅ.ಮಂಡಳಿಯಿಂದ ಮಂಜೂರಾದ ಕಾಮಗಾರಿಗಳು ಕೆ.ಆರ್.ಐ.ಡಿ.ಎಲ್ ಇಲಾಖೆ ಮೂಲಕ ಅನುಷ್ಠಾನಗೊಳಿಸುವಾಗ ಸರಕು ಮತ್ತು ತೆರಿಗೆ ಕಾಯ್ದೆ 2017ನ್ನು ಸಂಸ್ಥೆಯಲ್ಲಿ ಅಳವಡಿಸುವ ಕುರಿತು.

ಉಲ್ಲೇಖ: ತಮ್ಮ ಕಚೇರಿ ಜಿಎಸ್‌ಟಿ ಸುತ್ತೋಲೆ-3 ಸಂಖ್ಯೆ:ಕೆಆರ್‌ಐಡಿಎಲ್/ಲೆಕ್ಕಪತ್ರ/2017-18, ದಿನಾಂಕ: 11-10-2017

*****

ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಮಂಜರಾದ ಕಾಮಗಾರಿಗಳನ್ನು 6 ಜಿಲ್ಲೆಗಳಲ್ಲಿ ಕೆ.ಆರ್.ಐ.ಡಿ.ಎಲ್. ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಜಿ.ಜೆಸ್.ಟಿ. ಪೂರ್ವದಲ್ಲಿ ವಹಿಸಿದ ಕಾಮಗಾರಿಗಳಿಗೆ ಕಾಮಗಾರಿಯ ಅಂದಾಜು ಮೊತ್ತದ ಮೇಲೆ ಶೇ. 5 ರಷ್ಟು ಕೆ.ಆರ್.ಐ.ಡಿ.ಎಲ್. ಚಾರ್ಜ ಮತ್ತು ಶೆ. 1 ರಷ್ಟು ಕಾರ್ಮಿಕರ ಸೆಸ್, ಒಟ್ಟು ಶೇ. 6 ರಷ್ಟು ಮೊತ್ತವನ್ನು ನೀಡಲಾಗಿರುತ್ತದೆ.

ಆದರೆ ಉಲ್ಲೇಖಿತ ಸುತ್ತೋಲೆಯನ್ವಯ ಜೆ.ಎಸ್.ಟಿ. ಅಳವಡಿಸಿದ ಮೇಲೆ ಸರ್ಕಾರ, ಸ್ಥಳೀಯ ಸಂಸ್ಥೆಗಳು ಹಾಗೂ Government Authority ಗಳು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸುವ ಕಾಮಗಾರಿಗಳ ಅಂದಾಜು ಮೊತ್ತದ ಮೇಲೆ ಶೇ. 12 ರಷ್ಟು ಮತ್ತು ಇತರೆ ನಿಗಮ ಮಂಡಳಿ, ಸಂಘ ಸಂಸ್ಥೆ ಹಾಗೂ ಇತರೆಯವರು ವಹಿಸುವ ಎಲ್ಲಾ ಕಾಮಗಾರಿಗಳಿಗೆ ಶೇ. 18 ರಷ್ಟು ಜಿ.ಎಸ್.ಟಿ. ಅನ್ವಯವಾಗುತ್ತದೆ. ಶೇ. 5ರಷ್ಟು ತೆರಿಗೆ ಈಗಾಗಲೇ ಸಾಮಗ್ರಿಗಳಲ್ಲಿ ಸೇರಿರುವುದರಿಂದ ಅದನ್ನು (Input Tax Credit) ಕಳೆದು ಉಳಿದ ಮೊತ್ತದೆ ಮೇಲೆ ಶೇ. 18 / ಶೇ. 12 ರಷ್ಟು ಜಿ.ಎಸ್.ಟಿ., ಶೇ. 3 ರಷ್ಟು ಕೆ.ಆರ್.ಐ.ಡಿ.ಎಲ್. ಹಾಗೂ ಶೇ. 1 ರಷ್ಟು ಕಾರ್ಮಿಕರ ಸೆಸ್ ಪರಿಗಣಿಸಲು ತಿಳಿಸಲಾಗಿರುತ್ತದೆ.

ಈಗಾಗಲೇ ನಿಗಧಿಪಡಿಸಿದ ಅನುದಾನಕ್ಕೆ ಮಂಡಳಿಯಿಂದ ಕ್ರಿಯಾ ಯೋಜನೆ ಅನುಮೋದನೆ ನೀಡಿ ಅನುಷ್ಠಾನ ಇಲಾಖೆಗಳಿಗೆ ವಹಿಸಿಕೊಡಲಾಗಿರುತ್ತದೆ. ಕೆ.ಆರ್.ಐ.ಡಿ.ಎಲ್. ಇಲಾಖೆಗೆ ವಹಿಸಿರುವ ಕಾಮಗಾರಿಗಳಿಗೆ ಮಾತ್ರ ಜಿ.ಎಸ್.ಟಿ. ಯಿಂದ ಕ್ರಿಯಾ ಯೋಜನೆಯಲ್ಲಿ ನಿಗಧಿಪಡಿಸಿದ ಅನುದಾನದಕ್ಕಿಂತ ಹೆಚ್ಚಾಗುವುದರಿಂದ ಮಂಡಳಿಯ ಅನುದಾನದಲ್ಲಿ ವ್ಯತ್ಯಾಸವಾಗುತ್ತದೆ. ಹೆಚ್ಚುವರಿ ಅನುದಾನ ಈ ಹಂತದಲ್ಲಿ ಕ್ರಿಯಾ ಯೋಜನೆಯಲ್ಲಿ ಅಳವಡಿಸಲು ಸಾಧ್ಯವಾಗುವುದಿಲ್ಲ. ಜಿ.ಎಸ್.ಟಿ. ಪೂರ್ವದಲ್ಲಿ ಶೇ. 6 ರಷ್ಟು ಮೊತ್ತವನ್ನು ಪಾವತಿಸಲಾಗುತ್ತಿದೆ ಹಾಗೂ ಜಿಎಸ್.ಟಿ ಅನ್ವಯವಾದ ಮೇಲೆ ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಿರುವಂತೆ ಶೇ. 11 ರಷ್ಟು ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಶೇ. 3 ರಷ್ಟು ಕೆ.ಆರ್.ಐ.ಡಿ.ಎಲ್ ಚಾರ್ಜಸ್ ಕಡಿತಗೊಳಿಸದಲ್ಲಿ ಶೇ. 8 ರಷ್ಟು ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

ಪ್ರಯುಕ್ತ ಜಿ.ಎಸ್.ಟಿ ಅನ್ವಯವಾದ ಮೇಲೆ ಹೈ.ಕ.ವಿಭಾಗಕ್ಕೆ ಶೇ. 5ರಷ್ಟು ತೆರಿಗೆ ಈಗಾಗಲೇ ಸಾಮಗ್ರಿಗಳಲ್ಲಿ ಸೇರಿರುವುದರಿಂದ ಅದನ್ನು (**Input Tax Credit**) ಕಳೆದು ಉಳಿದ ಮೊತ್ತದ ಮೇಲೆ ಶೇ. 12 ರಷ್ಟು ಜಿ.ಎಸ್.ಟಿ., ಹಾಗೂ ಶೇ. 1 ರಷ್ಟು ಕಾರ್ಮಿಕರ ಸೆಸ್ ಮಾತ್ರ ಪರಿಗಣಿಸಲು ಹಾಗೂ ಕೆ.ಆರ್.ಐ.ಡಿ.ಎಲ್. ಚಾರ್ಜ ಕೈಬಿಡಲು ಹಾಗೂ ಹೈ.ಕ.ವಿಭಾಗದ 6 ಜಿಲ್ಲೆಗಳ ಕೆ.ಆರ್.ಐ.ಡಿ.ಎಲ್. ಇಲಾಖೆಗೆಗಳಿಗೆ ಸೂಕ್ತ ನಿರ್ದೇಶನ ನೀಡಲು ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ

ಪ್ರತಿಯನ್ನು:

1. ಎಲ್ಲಾ ಜಿಲ್ಲಾಧಿಕಾರಿಗಳು, ಹೈ.ಕ.ವಿಭಾಗ
2. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹೈ.ಕ.ವಿಭಾಗ
3. ಅಧೀಕ್ಷ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಕಲಬುರಗಿ/ಬಳ್ಳಾರಿ ಇವರಿಗೆ ಸೂಕ್ತ ಕ್ರಮಕ್ಕಾಗಿ
4. ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಹೈ.ಕ.ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ.